# ಡಿಸೆಂಬರ್‌ನಲ್ಲಿ ಬರಲಿದೆ 'ಪ್ರಜಾ ತೀರ್ಪು'

**ಧಾರವಾಡ:** ಕೃಷಿ ಸಂಶೋಧನೆಗಳ ಪ್ರಜಾತಾಂತ್ರೀಕರಣದ ಆಶಯವುಳ್ಳ, ರೈತರೇ ತೀರ್ಪು ನೀಡುವ 'ಪ್ರಜಾ ತೀರ್ಪು' ಎಂಬ ವಿಶಿಷ್ಟ ಕಾರ್ಯಕ್ರಮ ಡಿಸೆಂಬರ್‌ನಲ್ಲಿ ರಾಜ್ಯದಲ್ಲಿ ನಡೆಯಲಿದೆ. ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ (ಡಿಡಿಎಸ್) ನೇತೃತ್ವದಲ್ಲಿ ರಾಜ್ಯದ ಸಮಾನಮನಸ್ಕ ಸಂಘಟನೆಗಳ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಡಿಡಿಎಸ್ ನಿರ್ದೇಶಕ ಪಿ.ವಿ. ಸತೀಶ್, ಬಹುರಾಷ್ಟ್ರೀಯ ಕಂಪನಿಗಳ ನಿರ್ದೇಶನಕ್ಕೆ ಒಳಗಾಗಿರುವ ಕೃಷಿ ಸಂಶೋಧನೆಗಳು ಜೈವಿಕ ತಂತ್ರಜ್ಞಾನ ಮತ್ತು ಕುಲಾಂತರಿ ತಂತ್ರಜ್ಞಾನದತ್ತ ವಾಲುತ್ತಿವೆ. ಮಣ್ಣಿನ ಆರೋಗ್ಯ ಮತ್ತು ಜೀವ ವೈವಿಧ್ಯಕ್ಕೆ ಮಾರಕವಾಗಿರುವ ಕೃಷಿ ಪದ್ಧತಿ ನಮ್ಮ ರೈತರ ಮೇಲೆ ಹೇರುವುದರಿಂದ ಕೃಷಿರಂಗ ಮತ್ತಷ್ಟು ಅತಂತ್ರಗೊಳ್ಳುವ ಭೀತಿ ಎದುರಿಸುತ್ತಿದೆ ಎಂದರು.



• ಕೃಷಿ ಪದ್ಧತಿ, ಸಂಶೋಧನೆ ಬಗ್ಗೆ ರೈತರೇ ತೀರ್ಮಾನ ನೀಡುವ ವಿಶಿಷ್ಟ ಕಾರ್ಯಕ್ರಮ

ಈ ಹಿನ್ನೆಲೆಯಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣದ ಬಗ್ಗೆ ಜಗತ್ತಿನ ವಿವಿಧೆಡೆ ಚಿಂತನೆ ಪ್ರಾರಂಭಗೊಂಡಿವೆ. ರೈತರ ಅನುಭವ, ವಿಶೇಷ ಜ್ಞಾನ, ಅನುಶೋಧನೆಗಳು ಮುಂಚೂಣಿಗೆ ಬರಬೇಕು. ಕೃಷಿ ಸಂಶೋಧನೆ ಹೆಚ್ಚು ಪಾರದರ್ಶಕವಾಗಿರಬೇಕು. ದನಿವಂಚಿತರ, ಸಣ್ಣ ಹಾಗೂ ಮಧ್ಯಮ ರೈತರ ಅಗತ್ಯ, ಆಶೋತ್ತರಗಳಿಗೆ ಸಂಶೋಧನಾ ರಂಗ ಸ್ಪಂದಿಸಬೇಕು ಎಂಬ ಪ್ರತಿಪಾದನೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವೇದಿಕೆಯೊಂದು (ಐಎಎಸ್‌ಟಿಡಿ) ರೂಪುಗೊಂಡಿದೆ ಎಂದು ತಿಳಿಸಿದರು.

ಇದಕ್ಕೆ ಸಂವಾದಿಯಾಗಿ ಹೈದರಾಬಾದ್‌ನ ಡಿಡಿಎಸ್ ನೇತೃತ್ವದಲ್ಲಿ 'ಆದರ್ಶ' (ಅಲಯನ್ಸ್ ಫಾರ್ ಡೆಮಾಕ್ರಟೈಸಿಂಗ್ ಅಗ್ರಿಕಲ್ಚರಲ್ ರಿಸರ್ಚ್ ಇನ್ ಸೌತ್ ಏಷ್ಯಾ) ಎಂಬ ಕೂಟ ರಚನೆಯಾಗಿದೆ. ಕೃಷಿ ಸಂಶೋಧನೆ ಪ್ರಜಾತಾಂತ್ರೀಕರಣ ಆಶಯದೊಂದಿಗೆ ಈ ಕೂಟ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ಬರುವ ಡಿಸೆಂಬರ್ ಕೊನೆ ವಾರದಲ್ಲಿ ಕರ್ನಾಟಕದಲ್ಲಿ ಪ್ರಜಾ ತೀರ್ಪು ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಸತೀಶ್ ವಿವರಿಸಿದರು. ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ನೇತೃತ್ವದಲ್ಲಿ ಡಾ|ಎಚ್. ಸುದರ್ಶನ್, ಡಾ|ದ್ವಾರಕಿನಾಥ್, ದೇವನೂರ ಮಹಾದೇವ ಒಳಗೊಂಡ ವೀಕ್ಷಕರ ಸಮಿತಿ, ಸರ್ಕಾರ, ವಿವಿಧ ವಲಯಗಳ ಪ್ರತಿನಿಧಿಗಳು, ಸಂಶೋಧನಾ ಸಂಸ್ಥೆಗಳ ಪ್ರತಿನಿಧಿಗಳು ಸಾಕ್ಷಿದಾರರಾದ ಈ ಪ್ರಜಾ ತೀರ್ಪು ಕಾರ್ಯಕ್ರಮದಲ್ಲಿ ರೈತರೇ ತೀರ್ಪುಗಾರರು ಎಂದರು.

■ **ಮೇದಕ್ ಜಿಲ್ಲೆಯಲ್ಲಿ ನಡೆದಿತ್ತು:** ಈ ಹಿಂದೆ ಆಂಧ್ರಪ್ರದೇಶದ ಮೇದಕ್ ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಾಲ್ಕು ದಿನಗಳ ಕಾಲ ವಿವಿಧ ವಲಯಗಳ ವಿಚಾರ ಮಂಡನೆಯನ್ನು ಆಲಿಸಿ, ಚರ್ಚೆ ಪರಾಮರ್ಶೆ ನಡೆಸಿದ ರೈತ ತೀರ್ಪುಗಾರರು, ರೈತರಿಗೆ ಎಂತಹ ಕೃಷಿ ಪದ್ಧತಿ ಅಗತ್ಯ? ಅದಕ್ಕಾಗಿ ಯಾವ ಸ್ವರೂಪದ ಸಂಶೋಧನೆ ನಡೆಯಬೇಕು ಎಂಬ ತೀರ್ಪು ನೀಡಿದರು. ಈ ತೀರ್ಪು ಅನೇಕ ರೀತಿಯಲ್ಲಿ ಸಕಾರಾತ್ಮಕ ಪರಿಣಾಮ ಬೀರಿದೆ. ಅದೇ ರೀತಿ ರಾಜ್ಯದಲ್ಲೂ ಸಕಾರಾತ್ಮಕ ಪರಿಣಾಮ ಉಂಟಾಗುವ ಆಶಯವಿದೆ ಎಂದು ಹೇಳಿದರು.